ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

**KARNATAK UNIVERSITY DHARWAD**

ಪರೀಕ್ಷಾ ವಿಭಾಗ

ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ

**EXAMINATION SECTION**

Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2024/ 221 ದಿನಾಂಕ :06.01.2024

## ಪರಿಷ್ಕೃತ ಸುತ್ತೋಲೆ

ವಿಷಯ : ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅಡಿಯಲ್ಲಿ ಜಾರಿಯಲ್ಲಿರುವ ಎಲ್ಲ ಸ್ನಾತಕ ಪದವಿ ತರಗತಿಗಳ 1ನೇ ಸೆಮಿಸ್ಟರ್‌ನ Digital Fluency ಮತ್ತು 3ನೇ ಸೆಮಿಸ್ಟರ್‌ನ Artificial Intelligence ವಿಷಯಗಳ ಆಂತರಿಕ ಪರೀಕ್ಷೆಗಳನ್ನು ಮುಂದೂಡಿರುವ ಕುರಿತು.

ಉಲ್ಲೇಖ :1)ಕಚೇರಿ ಸುತ್ತೋಲೆ ಸಂಖ್ಯೆ: ನಂ.ಕವಿವಿ/ಪರೀಕ್ಷಾ(ಗೌಪ್ಯ)/2023/213 ದಿನಾಂಕ: 13.12.2023

2) ಕಚೇರಿ ಸುತ್ತೋಲೆ ಸಂಖ್ಯೆ: ನಂ.ಕವಿವಿ/ಪರೀಕ್ಷಾ(ಗೌಪ್ಯ)/2023/218 ದಿನಾಂಕ: 01.01.2024

** **

ಮೇಲ್ಕಾಣಿಸಿದ ವಿಷಯ ಸಂಬಂಧಿಸಿದಂತೆ, ಉಲೇಖ '2' ರಲ್ಲಿ ತಿಳಿಸಿದಂತೆ ಎಲ್ಲ ಸ್ನಾತಕ ಪದವಿ ತರಗತಿಗಳ 1ನೇ ಸೆಮಿಸ್ಟರ್‌ನ Digital Fluency ಮತ್ತು 3ನೇ ಸೆಮಿಸ್ಟರ್‌ನ Artificial Intelligence ವಿಷಯಗಳ ಆಂತರಿಕ ಪರೀಕ್ಷೆಗಳನ್ನು ದಿನಾಂಕ: 13.01.2024 ರಂದು ಜರುಗಿಸಲು ತಿಳಿಸಲಾಗಿತ್ತು. ಮುಂದುವರೆದು, ಸದರಿ ದಿನದಂದು ಕೆ-ಸೆಟ್ (K-SET) ಪರೀಕ್ಷೆಗಳು ಜರುಗುತ್ತಿರುವುದರಿಂದ 1ನೇ ಸೆಮಿಸ್ಟರ್‌ನ Digital Fluency ಮತ್ತು 3ನೇ ಸೆಮಿಸ್ಟರ್‌ನ Artificial Intelligence ವಿಷಯಗಳ ಆಂತರಿಕ ಪರೀಕ್ಷೆಗಳನ್ನು ದಿನಾಂಕ: 18.01.2024 ರಂದು ಜರುಗಿಸಲು ನಿರ್ಧರಿಸಲಾಗಿದೆ.

ಕಾರಣ, ಸಂಬಂಧಪಟ್ಟ ಪ್ರಾಚಾರ್ಯರುಗಳಿಗೆ ಸದರಿ ವಿಷಯವನ್ನು ಈ ಕೆಳಗೆ ನಮೂದಿಸಿದ ವಿವರಗಳಂತೆ ಎಲ್ಲ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರುಗಳಿಗೆ ತಿಳಿಸಲು ಅಗತ್ಯ ಕ್ರಮಕೈಗೊಳ್ಳುವುದು. ಮುಂದುವರೆದು,

1) ಯಾವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು Online ಮುಖಾಂತರ Digital Fluency ಮತ್ತು Artificial Intelligence ಕಲಿಯುತ್ತಿರುತ್ತಾರೋ ಅಂತಹ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾತ್ರ ಕ.ವಿ.ವಿ.,ಯು Complete Syllabus ಮೇಲೆ IA ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಕಳುಹಿಸಲಾಗುವುದು ಅದರಂತೆ Online ಮುಖಾಂತರ ಕಲಿತ ವಿದ್ಯಾರ್ಥಿಗಳಿಗೆ ಮಾತ್ರ ಸದರಿ ಪರೀಕ್ಷೆ ಜರುಗಿಸುವುದು.

2) Offline Mode ಮುಖಾಂತರ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಕ.ವಿ.ವಿ., ಜರುಗಿಸುತ್ತಿರುವ ಈ IA ಪರೀಕ್ಷೆಗಳು ಅನ್ವಯಿಸುವುದಿಲ್ಲ. ಅದನ್ನು ಆಯಾ ಕಾಲೇಜಿನ ವಿಷಯ ಬೋಧಕರು, Test, Assignment Attendence ಇತ್ಯಾದಿಗಳನ್ನು ಆಯೋಜಿಸಿ ಅದರ ಆಧಾರದ ಮೇಲೆ ಅಂಕಗಳನ್ನು ನೀಡುವ ಜವಾಬ್ದಾರಿ ಹೊಂದಿರುತ್ತಾರೆ.

3) ಕೆಲವು ಸರ್ಕಾರಿ ಕಾಲೇಜುಗಳಲ್ಲಿ Offline Mode ಮುಖಾಂತರ ಕಲಿಯಲು ಆಯ್ಕೆ ಮಾಡಿಕೊಂಡಿದ್ದಲ್ಲಿ ಸಂಬಂಧಪಟ್ಟ ಅತಿಥಿ ಉಪನ್ಯಾಸಕರು ಮುಷ್ಕರದಿಂದ ಮರಳಿ ಬಂದು ಪಠ್ಯಕ್ರಮ ಪೂರ್ಣಗೊಳಿಸಿದ ನಂತರ ಮೇಲಿನಂತೆ ಕ್ರಮಕೈಗೊಳ್ಳುವುದು.

ಆಂತರಿಕ ಪರೀಕ್ಷೆಗೆ ಪ್ರಶ್ನೆ ಪತ್ರಿಕೆಯ ಈ ಹಿಂದಿನ ಮಾದರಿಯಂತೆ: MCQ 20 ಅಂಕಗಳು – ಪ್ರತಿ ಪ್ರಶ್ನೆಗೆ 1 ಅಂಕ.

**ಉತ್ತರಿಸುವ ವಿಧಾನ** : OMR ಮಾದರಿಯ ಉತ್ತರ ಪತ್ರಿಕೆ(ಮಾದರಿ ಲಗತ್ತಿಸಲಾಗಿದೆ).

ಮುಂದುವರೆದು, ಆಂತರಿಕ ಪರೀಕ್ಷೆಯ ವೇಳಾಪಟ್ಟಿ ಈ ಕೆಳಗಿನಂತಿದೆ.

a) ಒಂದನೇ ಸೆಮಿಸ್ಟರ್‌ನ Digital Fluency : ದಿನಾಂಕ.18.01.2024 ಸಮಯ:11.00 **ರಿಂದ** 12.00 ಮಧ್ಯಾಹ್ನ

b) ಮೂರನೇ ಸೆಮಿಸ್ಟರ್‌ನ Artificial Intellagence : ದಿನಾಂಕ.18.01.2024 ಸಮಯ: ಮಧ್ಯಾಹ್ನ 1.00 **ರಿಂದ** 2.00.

ಆಂತರಿಕ ಪರೀಕ್ಷೆಗೆ ಸಂಬಂಧಪಟ್ಟ ವಿಷಯಗಳ ಪ್ರಶ್ನೆ ಪತ್ರಿಕೆಯನ್ನು ಪರೀಕ್ಷಾ ಅವಧಿಯ ಒಂದು ಘಂಟೆ ಮುಂಚಿತವಾಗಿ ಪ್ರಾಚಾರ್ಯರ ಇಮೇಲ್‌ಗಳಿಗೆ ಪರೀಕ್ಷಾ ಗೌಪ್ಯ ವಿಭಾಗದ ಮುಖಾಂತರ ಕಳುಹಿಸಲಾಗುವುದು. ಆಂತರಿಕ ಪರೀಕ್ಷೆಯು ಮುಗಿದ ನಂತರ ಸದರಿ OMR ಮಾದರಿಯ ಉತ್ತರ ಪತ್ರಿಕೆಗಳನ್ನು ಮಹಾವಿದ್ಯಾಲಯದ ಹಂತದಲ್ಲಿ ಮೌಲ್ಯಮಾಪನ ಮಾಡಿ UUCMS ನಲ್ಲಿ ಕಳೆದ ಸಾಲಿನಂತೆ ಅಂಕಗಳನ್ನು ಅಳವಡಿಸಬೇಕೆಂದು ಸೂಚಿಸಲಾಗಿದೆ.

ಮುಂದುವೆರದು, ಸದರಿ ವಿಷಯಗಳ ಸೆಮಿಸ್ಟರ್ ಕೊನೆಯ ಪರೀಕ್ಷೆಗಳನ್ನು ಎಂದಿನಂತೆ ಇತರ ಪರೀಕ್ಷೆಗಳೊಂದಿಗೆ ಜರುಗಿಸಲಾಗುವುದು.

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

**ಪ್ರತಿ ಮಾಹಿತಿಗಾಗಿ:**

1. ಡಾ. ಎಸ್.ಎಂ.ತುವಾರ, ಮುಖ್ಯ ನೋಡಲ್ ಅಧಿಕಾರಿ ಮತ್ತು ಸಹಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
2. ಡಾ. ಶಿವಶಂಕರ ಎಸ್., ಸಹ ನೋಡಲ್ ಅಧಿಕಾರಿ ಮತ್ತು ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಕಯಂತ್ರ ವಿಭಾಗ, UUCMS ಘಟಕ, ಕ.ವಿ.ವಿ. ಧಾರವಾಡ.
3. ಡಾ. ಎಂ.ಎನ್.ಮೆಗೇರಿ, ಸಹ ನೋಡಲ್ ಅಧಿಕಾರಿ ಮತ್ತು ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ
4. ಡಾ. ಬಿ.ಬಿ.ಬಿರಾದಾರ, ನೋಡಲ್ ಅಧಿಕಾರಿ Artificial Intelligence ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.
5. ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ. (ಸದರ ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
7. ಉಪಕುಲಸಚಿವರು/ ಸಹಾಯಕ ಕುಲಸಚಿವರು ಪರೀಕ್ಷಾ ವಿಭಾಗ, ಕ.ವಿ.ವಿ., ಧಾರವಾಡ.
8. ಕುಲಪತಿಗಳು/ಕುಲಸಚಿವರ/ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
9. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಕಲಾ / ವಾಣಿಜ್ಯ / ವಿಜ್ಞಾನ ವಿಭಾಗ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.